# ವೀಸಾದ ನಿರೀಕ್ಷೆಯಲ್ಲಿನ ನೆನಪುಗಳ ಸುರುಳಿ

ವಿಜಯಲಕ್ಷ್ಮಿ ದತ್ತಾತ್ರೇಯ ದೊಡ್ಡಮನಿ

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿ, ಕಡಗಂಚಿ.

DOI: https://doi.org/10.5281/zenodo.15504724

## ABSTRACT:

ಆತ್ಮಕಥೆ ಕನ್ನಡ ಸಾಹಿತ್ಯದ ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿರುವುದನ್ನು ನೋಡುತ್ತೇವೆ. ಮನುಷ್ಯನ ಸುತ್ತಲೂ ನಡೆಯುವ ಮತ್ತು ಅವರ ಅಂತರಾಳದಲ್ಲಿರುವ ಹೂರಣಗಳನ್ನು ಹೊರ ಹಾಕುವ ಒಂದು ಪ್ರಕಾರವಾಗಿ ಕಾಣುತ್ತೇವೆ. ಒಬ್ಬ ಮನುಷ್ಯನ ಇಡೀ ಬದುಕಿನಲ್ಲಿ ನಡೆದಂತಹ ತಪ್ಪು-ಸರಿ, ಸಿಹಿ-ಕಹಿ ಘಟನೆಗಳಿಗೆ ಅಕ್ಷರ ರೂಪವನ್ನು ನೀಡುತ್ತಾನೆ. ತಮ್ಮ ಅಂತರಾಳದ ತಮುಲಗಳನ್ನು ಸ್ವವಿಮರ್ಶೆಗೆ ಒಳಪಡಿಸಿಕೊಳ್ಳಲಾಗುತ್ತದೆ. ಆದರೆ ಬಾಬಾ ಸಾಹೇಬರು ಬರೆದ ಅವರ ಆತ್ಮಕಥೆಯಲ್ಲಿ ಅವರ ಬದುಕಿನ ಕಹಿ ಘಟನೆಗಳು ಹೇಗೆ ಮುಂದೆ ಅವರು ಇಡೀ ಸಮಾಜದ ಏಳಿಗೆಗಾಗಿ ಅವುಗಳನ್ನೆ ಆಧಾರವಾಗಿ ಬಳಸಿಕೊಂಡರು ಎನ್ನುವುದನ್ನು ಅವರ ಬದುಕೆ ನಮಗೆ ತೋರಿಸಿಕೊಡುತ್ತದೆ. 'ವೀಸಾದ ನಿರೀಕ್ಷೆಯಲ್ಲಿನ ನೆನಪುಗಳ ಸುರುಳಿ' ಇದು ಡಾ. ಬಿ.ಆರ್. ಅಂಬೇಡ್ಕರ್ ಅವರು ಬರೆದಿರುವ ಆತ್ಮಕಥೆ ಅವರ ಬದುಕಿಗೆ ಸಂಬಂಧಿಸಿದ ಕಹಿ ಘಟನೆಗಳ ಅನಾವರಣವನ್ನು ಇಲ್ಲಿ ಕಾಣುತ್ತೇವೆ. ಈ ಆತ್ಮಕತೆಯು ಫ್ಲಾಶ್ ಬ್ಯಾಕ್ ತಂತ್ರವನ್ನು ಒಳಗೊಂಡಿದೆ. ಹಾಗೆ ಈ ಲೇಖನದಲ್ಲಿ ಬಾಬಾ ಸಾಹೇಬರ ಬದುಕಿನಲ್ಲಿ ನಡೆದಂತಹ ಘಟನೆಗಳನ್ನು ಇಟ್ಟುಕೊಂಡು ಪ್ರಸ್ತುತ ಘಟನೆಗಳೊಂದಿಗೆ ಸಮೀಕರಿಸಿ ಪ್ರತ್ಯೇಕ ಮತಕ್ಷೇತ್ರವನ್ನು ಬಾಬಾ ಸಾಹೇಬರು ಯಾಕೆ? ಬಯಸಿದ್ದರು, ಅದರ ಫಲವಾಗಿಯೇ ಇಂದು ದೊರೆತ ಮೀಸಲಾತಿಯ ಕುರಿತು ಇಲ್ಲಿ ಚರ್ಚಿಸಲಾಗಿದೆ.

## KEYWORDS:

ಅಸ್ಪೃಶ್ಯತೆ, ಮೀಸಲಾತಿ, ನೆನಪು, ಸುರುಳಿ, ಘನತೆ.

ಬಾಬಾ ಸಾಹೇಬ್ ಅಂಬೇಡ್ಕರ್‌ರ ಆತ್ಮಕಥೆ 'ವೀಸಾದ ನಿರೀಕ್ಷೆಯಲ್ಲಿ' ಪುಸ್ತಕವು ಹಲವು ಅರ್ಥಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ. ಮೊದಲು ಈ ಶೀರ್ಷಿಕೆಯಲ್ಲಿಯೇ ತುಂಬಾ ಆಳವಾದ ಅರ್ಥ ಅಡಗಿರುವುದನ್ನು ಕಾಣುತ್ತೇವೆ. ವೀಸಾದ ನಿರೀಕ್ಷೆಯಲ್ಲಿ ಎಂದ ತಕ್ಷಣ ನೆನಪಾಗುವುದು 'ನಮ್ಮದಲ್ಲದ ದೇಶದ ಪ್ರವೇಶಕ್ಕೆ ಅನುಮತಿಗಾಗಿ ಅವರು ಕಾಯುತ್ತಿರಬಹುದು' ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಈ ಪ್ರಶ್ನೆಯನ್ನು ಆಳವಾಗಿ ಶೋಧಿಸುತ್ತಾ ಹೋದರೆ ಅದರಲ್ಲಿ ಹಲವು ರೀತಿಯಾದ ಪ್ರಶ್ನೆಗಳ ಒಂದೊಂದೇ ಸುರುಳಿಗಳು ಬಿಚ್ಚುತ್ತಾ ಹೋಗುತ್ತವೆ. 21ನೇ ಶತಮಾನದಲ್ಲಿಯೂ ಈ ಪ್ರಶ್ನೆಗಳಿಗೆ ನಿಖರವಾದ ಉತ್ತರ ದೊರೆತೇ ಇಲ್ಲ. ಎನ್ನುವುದನ್ನು ಇಂದು ಅರಿತುಕೊಳ್ಳುವುದು ತುಂಬಾ ಅವಶ್ಯಕವಾಗಿದೆ.

ಶತಮಾನಗಳಿಂದ ಎಲ್ಲಾ ರೀತಿಯಿಂದಲೂ ಶೋಷಣೆಗೆ, ದಮನಕ್ಕೆ, ಜಾತಿಯ ಕಾರಣಕ್ಕೆ ಸಮಾಜದಿಂದ ಅಸ್ಪೃಶ್ಯರಾಗಿ ಹೊರಗುಳಿದವರು. ಸಮಾಜವನ್ನು ಒಳಗೊಳ್ಳುವ ನಿರೀಕ್ಷೆಯಲ್ಲಿ ಈ ಧ್ವನಿ ಇದೆ. ಬಹುತ್ವ, ಸಹೋದರತೆ, ಸಮ ಸಮಾಜದ ಕನಸುಗಳನ್ನು ಜಾತಿವಾದಿ ಸಮಾಜದ ಮುಂದೆ ಇಟ್ಟಿದ್ದಾರೆ. ಈ ಪುಸ್ತಕ ಪ್ರಾರಂಭವಾಗುವುದೇ ವೀಸಾದ ನಿರೀಕ್ಷೆಯಲ್ಲಿನ ನೆನಪುಗಳು ಎನ್ನುವ ಶೀರ್ಷಿಕೆಯಿಂದ. ಅಸ್ಪಶ್ಯರು ಊರ ಅಂಚಿನಲ್ಲಿ ಇದ್ದರೂ ಕೂಡ ಸ್ಪೃಷ್ಯರು ವಾಸವಾಗಿದ್ದ ಊರಿನ ಹೊಲಸನ್ನು ಸ್ವಚ್ಛಗೊಳಿಸಿ, ಅವರು ಆರೋಗ್ಯವಾಗಿ ಇರುವ ಹಾಗೆ ಮಾಡಿದವರು. ಅದೇ ಊರಂಚಿನಲ್ಲಿರುವವರೆ ಎನ್ನುವ ವಿಷಯದಿಂದ ಬಾಬಾ ಸಾಹೇಬರ ಆತ್ಮಕಥೆಯ ನೆನಪಿನ ಪಯಣ ಪ್ರಾರಂಭವಾಗುತ್ತದೆ.

ಜಾತಿಯ ಕಾರಣಕ್ಕಾಗಿ ಅಸ್ಪಶ್ಯರು ಅನುಭವಿಸುತ್ತಿದ್ದ ಶೋಷಣೆಯ ಅನೇಕ ಘಟನೆಗಳನ್ನು ಕಂಡಿದ್ದು, ಮತ್ತೆ ತಾವೇ ಸ್ವತಃ ಅನುಭವಿಸಿದ ಸಾಹೇಬರ ನೆನಪುಗಳು ಸುರುಳಿಯಾಗಿ ಒಂದೊಂದಾಗಿ ಬಿಚ್ಚಿಕೊಳ್ಳುತ್ತವೆ. ಈ ನೆನಪಿನ ಸುರುಳಿಯಲ್ಲಿ ಮೊದಲು ತೆರೆದುಕೊಳ್ಳುವ ಅಧ್ಯಾಯವೇ 1901ರಲ್ಲಿ ನಡೆದ ಘಟನೆ. ಇದು ಈಗಾಗಲೇ ತುಂಬಾ ಚರ್ಚೆಗೆ ಒಳಗಾದ ಘಟನೆಯಾಗಿದೆ. ಆ ಘಟನೆಯನ್ನು ಇಲ್ಲಿ ಚರ್ಚಿಸದೆ, ಅದಕ್ಕೆ ಹೋಲಿಸುವಂತಹ ಮತ್ತೊಂದು ಘಟನೆಯನ್ನು ಇಲ್ಲಿ ಚರ್ಚಿಸಲು ಬಯಸುತ್ತೇನೆ. ಮಹಾತ್ಮಗಾಂಧೀಜಿಯವರು ಇಂಥದೇ ಅಸ್ಪೃಶ್ಯತೆಯನ್ನು ಅನುಭವಿಸಿದರು. ಬಾಬಾ ಸಾಹೇಬರ ಘಟನೆಗೆ ಹೋಲಿಸುವಂಥ ಒಂದು ಘಟನೆ. ಒಬ್ಬ ಸ್ಪೃಷ್ಯರ ಬದುಕಿನಲ್ಲಿ ಅಂತಹ ಅನುಭವ ಕೇವಲ ಬೆರಳೆಣಿಕೆಯಷ್ಟೇ ಅನುಭವಿಸುತ್ತಾರೆ. ಕೆಲವೊಮ್ಮೆ ಅದು ಇಲ್ಲ. ಆದರೆ ಅದನ್ನೇ ದೊಡ್ಡದು ಮಾಡಿ ಚಿತ್ರಿಸುತ್ತಾರೆ. ಈಗಲೂ ಚಿತ್ರಿಸುತ್ತಲೇ ಇದ್ದಾರೆ. ಉದಾಹರಣೆಗೆ ಗಾಂಧೀಜಿ ಒಮ್ಮೆ ಪ್ರಥಮ ದರ್ಜೆಯ ರೈಲಿನಲ್ಲಿ ಟಿಕೆಟ್ ಹೊಂದಿದ್ದರು. ಅವರನ್ನು ರೈಲಿನಿಂದ ಇಳಿಸಿ ಡಬ್ಬಿಯನ್ನು ಬದಲಿಸಲು ತಿಳಿಸಲಾಯಿತು. ಈ ಘಟನೆ ಇವರ ಬದುಕಿನಲ್ಲಿ ನಡೆದಾಗ ಅವರು ವಕೀಲರಾಗಿದ್ದರು. ಅಂದರೆ ಅವರು ತಮ್ಮ ವೃತ್ತಿ ಬದುಕನ್ನು ಆರಂಭಿಸಿದ್ದರು. ಈ ಘಟನೆಯನ್ನು ಇಂದಿನ ಯುವ ಪಿಳಿಗೆ ಬಾಬಾಸಾಹೇಬರು ಅನುಭವಿಸಿದ್ದ ಅಸ್ಪೃಶ್ಯತೆಗೆ ಹೊಲಿಸಿಕೊಂಡು ಮಾತನಾಡುತಿರುವುದನ್ನು ಕಾಣುತ್ತೇವೆ. ಆದರೆ 9 ವರ್ಷದವರಾದ ಬಾಬಾ ಸಾಹೇಬರ ಅನುಭವಕ್ಕೂ ಗಾಂಧೀಜಿಯ ಈ ಅನುಭವಕ್ಕೂ ಎಲ್ಲಿಯ ಸಾಮ್ಯತೆ ಇದೆ. ಬಾಬಾ ಸಾಹೇಬರು ಅಂದು ಅನುಭವಿಸಿದ ನೋವು, ಯಾತನೆ ಭರಿಸಲು ಸಾಧ್ಯವೇ ಇಲ್ಲ. ಆದ್ದರಿಂದ ಗಾಂಧೀಜಿಯವರ ಈ ಘಟನೆಯನ್ನು ಬಾಬಾ ಸಾಹೇಬರ ಬದುಕಿನ 1901ರ ಘಟನೆಗೆ ಅಜ ಗಜಾಂತರವಾದ ಅಂತರವಿದೆ. ಇಲ್ಲಿ ಯಾರು ಊರ ಒಳಗಿದ್ದವರು ಯಾರು? ಇಂದಿಗೂ ಊರ ಒಳಗಿನ ಮನಸ್ಸುಗಳ ಒಳಗೆ ಅಂಚಿನಲ್ಲಿ ಇರುವರು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ.

ಅದೇ ರೀತಿಯಾಗಿ ಇನ್ನೊಂದು ಘಟನೆಯನ್ನು ನಾವು ನೋಡಬಹುದು. ಅಸ್ಪೃಶ್ಯರ ಅನುಭವಗಳು ಹುಟ್ಟಿನಿಂದಲೇ ಪ್ರಾರಂಭವಾಗುತ್ತವೆ. ಆದರೆ ಅಸ್ಪೃಶ್ಯತೆಯ ಅನುಭವ ತಾರತಮ್ಯಗಳು ತಿಳಿಯುವುದಿಲ್ಲ ಅಷ್ಟೇ. ಬಾಬಾ ಸಾಹೇಬರು 9 ವರ್ಷದವರಿದ್ದಾಗಲೇ ತಮ್ಮ ಬದುಕಿನ ಮೇಲೆ ಗಾಢವಾಗಿ ಪ್ರಭಾವಿಸಿದ ವಿಷಯ 1901 ರಲ್ಲಿ ನಡೆದ ಘಟನೆಯಾಗಿದೆ. ಅದಕ್ಕೂ ಮುಂಚೆಯೇ ಅನೇಕ ಘಟನೆಗಳು ಅವರ ಬದುಕಿನಲ್ಲಿ ನಡೆದಿರುವುದನ್ನು ಹೀಗೆ ಸ್ಮರಿಸಿಕೊಳ್ಳುತ್ತಾರೆ. "ಸ್ಪೃಶ್ಯ ಸಹಪಾಠಿಗಳು ತಮಗೆ ನೀರಡಿಕೆಯಾದಾಗ ಹೊರಗೆ ಹೋಗಿ ನಲ್ಲಿಯನ್ನು ಉಪಯೋಗಿಸಿ ನೀರು ಕುಡಿದು ತಮ್ಮ ದಾಹವನ್ನು ತೀರಿಸಿಕೊಳ್ಳುತ್ತಿದ್ದರು. ಆದರೆ ನನ್ನ ಪರಿಸ್ಥಿತಿ ತೀರ ಭಿನ್ನವಾಗಿದ್ದಿತ್ತು. ನಾನು ನಲ್ಲಿಯನ್ನು ಮುಟ್ಟುವಂತಿರಲಿಲ್ಲ. ಸ್ಪೃಶ್ಯ ಜಾತಿಯವರು ಯಾರಾದರೂ ನಲ್ಲಿಯನ್ನು ಪ್ರಾರಂಭಿಸಿದ್ದಲ್ಲಿ ದೂರದಿಂದಲೇ ನಾನು ನೀರು ಕುಡಿಯಬೇಕಿತ್ತು. ಇಲ್ಲದಿದ್ದರೆ ನನ್ನ ನೀರಡಿಕೆಯನ್ನು ತೀರಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಇಂತಹ ಉದ್ದೇಶಕ್ಕಾಗಿ ಶಿಕ್ಷಕರು ಶಾಲೆಯ ಜವಾನನನ್ನೇ ಉಪಯೋಗಿಸಿ ಆತನಿಂದಲೇ ನೀರು ನೀಡಲು ಪ್ರಯತ್ನಿಸುತ್ತಿದ್ದರಿಂದ ಜವಾನನ ಉಪಸ್ಥಿತಿಯು ಅವಶ್ಯಕವಾಗಿತ್ತು. ಒಂದು ವೇಳೆ ಜವಾನನು ಇರದಿದ್ದರೆ ನೀರಿಲ್ಲದೆ ನಾನು ಬಳಲಬೇಕಾದ ಪರಿಸ್ಥಿತಿ ಇತ್ತು"[1]. ಈ ಘಟನೆ ಮುಖ್ಯವಾಗಿ ಉಲ್ಲೇಖಿಸಲು ಕಾರಣವೇನೆಂದರೆ 21ನೇ ಶತಮಾನದಲ್ಲಿ ಬದುಕುತ್ತಿದ್ದೇವೆ. ಸಂವಿಧಾನ ಜಾರಿಯಾಗಿ 76 ವರ್ಷಗಳೇ ಕಳೆದಿವೆ. ಆದರೆ ಇಂದಿಗೂ ಅಸ್ಪೃಶ್ಯರು ಬೊಗಸೆ ನೀರಿಗಾಗಿ ಪ್ರಾಣ ತೆತ್ತುತ್ತಿದ್ದಾರೆ. ಹಾಗಾದರೆ ದಲಿತರು ಇಂದು ಊರ ಅಂಚಿನಿಂದ ಒಳಗಾಗಿದ್ದಾರೆಯೇ? ಅಥವಾ ಒಳಗೆ ಇದ್ದೇವೆ ಎಂಬ ಭ್ರಮೆಯಲ್ಲಿ ಜೀವಿಸುತ್ತಿದ್ದಾರೆಯೇ? ಎನ್ನುವ ಪ್ರಶ್ನೆಗಳು ನಮಗೆ ನಾವೇ ಹಾಕಿಕೊಳ್ಳಬೇಕಾಗಿದೆ.

ಬಾಬಾ ಸಾಹೇಬರ ವೀಸಾದ ನಿರೀಕ್ಷೆಯಲ್ಲಿನ ನೆನಪುಗಳ ಸುರುಳಿಯನ್ನು ಇಟ್ಟುಕೊಂಡೆ ಮೀಸಲಾತಿಯ ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಶೋಷಿತ ಸಮುದಾಯದ ಬದುಕಿನಲ್ಲಿ ನಡೆದ ಸಾಮಾಜಿಕ ಅಸಮಾನತೆಯ ಹಿನ್ನೆಲೆಯಲ್ಲಿ ಮೀಸಲಾತಿ ಹಕ್ಕಾಗಿರುವುದರ ಸುತ್ತಲೂ ಈ ಚರ್ಚೆ ನಡೆದಿದೆ. ಈ ಮೀಸಲಾತಿಯ ಮೊದಲ ಪ್ರಸ್ತಾಪವಾಗುವುದೇ ಸೈಮನ್ ಕಮಿಷನ್ ಆಯೋಗದಲ್ಲಿ. ಈ ಸೈಮನ್ ಕಮಿಷನ್ ಸದಸ್ಯರಾಗಿದ್ದ ಸರ್ ಹರಿಸಿಂಗ್ ಗೌರ್ ಅವರು ಹೀಗೆ ಹೇಳುತ್ತಾರೆ. "ನಿಮ್ನ ವರ್ಗಗಳು ಮತ್ತು ಅಸ್ಪೃಶ್ಯವರ್ಗಗಳು ಎಂಬ ಎರಡು ಪದಗಳು ಸಮಾನಾರ್ಥಕವಾದವುವೇ? ಎಂದು ಬಾಬಾ ಸಾಹೇಬರನ್ನು ಪ್ರಶ್ನಿಸುತ್ತಾರೆ. ಆಗ ಬಾಬಾ ಸಾಹೇಬರು ಹೌದು ನಿಮ್ನ ವರ್ಗಗಳು ವಿಶಿಷ್ಟ, ಸ್ವತಂತ್ರ ಮತ್ತು ಪ್ರತ್ಯೇಕ ಅಲ್ಪಸಂಖ್ಯಾತ ಸಮುದಾಯ. ಹಿಂದೂ ಸವರ್ಣೀಯ ಸಮುದಾಯದ ಒಂದು ಭಾಗವಾಗಿ ನಮ್ಮನ್ನು ಪರಿಗಣಿಸಬಾರದು. ನಿಮ್ನ ವರ್ಗಗಳು ಶೈಕ್ಷಣಿಕವಾಗಿ ತೀರ

ಹಿಂದುಳಿದಿವೆ; ಆರ್ಥಿಕವಾಗಿ ಕಡುಬಡತನದಲ್ಲಿವೆ, ಸಾಮಾಜಿಕವಾಗಿ ತೀವ್ರ ತಾರತಮ್ಯಕ್ಕೆ ಗುರಿಯಾಗಿವೆ. ಅಸ್ಪೃಶ್ಯತೆಯಂತಹ ಸಮಸ್ಯೆಯನ್ನು ಇನ್ಯಾವ ಅಲ್ಪಸಂಖ್ಯಾತ ಸಮುದಾಯವು ಎದುರಿಸುತ್ತಿಲ್ಲ. ಆದ್ದರಿಂದ ವೈಯಸ್ಕ ಮತದಾನ ಪದ್ಧತಿ ಜಾರಿಗೆ ಬಂದಾಗ ನಮಗೆ ಮೀಸಲು ಸ್ಥಾನಗಳನ್ನು ಒದಗಿಸಬೇಕು"[2] ಎಂದು ಹೇಳುತ್ತಾರೆ.

ಹೀಗೆ ಮುಂದುವರೆದು ಎರಡನೇ ದುಂಡು ಮೇಜಿನ ಸಭೆಯಲ್ಲಿ ನಡೆದ ಚರ್ಚೆಗಳಿಂದ ಕೊನೆಗೆ ನಿಮ್ನ ವರ್ಗದವರಿಗೆ ಪ್ರತ್ಯೇಕ ಮತಕ್ಷೇತ್ರವನ್ನು ಮಂಜೂರು ಮಾಡಿದ್ದರು. ಆದರೆ ಇದನ್ನು ವಿರೋಧಿಸಿ ಗಾಂಧೀಜಿಯವರು "ಹಿಂದುಗಳಿಂದ ಅಸ್ಪೃಶ್ಯರನ್ನು ಬೇರ್ಪಡಿಸಿ ಮತಕ್ಷೇತ್ರ ಮಂಜೂರು ಮಾಡಿದ ನಿರ್ಣಯವನ್ನು ಉಗ್ರವಾಗಿ ಖಂಡಿಸಲು ಜೈಲಿನಲ್ಲೇ [ಪುಣೆಯ ಯರವಾಡ್]ನಲ್ಲಿ ತಾವು ಅಮರಣಾಂತ ಉಪವಾಸ ಮಾಡುವುದಾಗಿ ಘೋಷಿಸಿದ್ದರು. ಕ್ರೈಸ್ತರನ್ನು, ಮುಸ್ಲಿಮರನ್ನು ಮತ್ತು ಸಿಕ್ಕರನ್ನು ರಾಜಕೀಯವಾಗಿ ಪ್ರತ್ಯೇಕಗೊಳಿಸಿದ್ದಕ್ಕೆ ಅವರ ವಿರೋಧ ವ್ಯಕ್ತವಾಗಿರಲಿಲ್ಲ"[3] ಎಂದು ಬಾಬಾ ಸಾಹೇಬರು ತಮ್ಮ ಬೇಸರವನ್ನು ವ್ಯಕ್ತಪಡಿಸುತ್ತಾರೆ. ನಿಮ್ನ ವರ್ಗದ ಏಳಿಗೆ ಯಾರಿಗೂ ಬೇಡದ ವಿಷಯವಾಗಿತ್ತು. ಇದನ್ನು ಎಚ್. ಎನ್ ನಾಗಮೋಹನದಾಸ್ ಅವರು "ಧರ್ಮವಾರು ಪ್ರತ್ಯೇಕ ಮತಕ್ಷೇತ್ರಗಳ ವ್ಯವಸ್ಥೆ"[4] ಎಂದು ಕರೆಯುತ್ತಾರೆ. ಪುನಾ ಒಪ್ಪಂದದಂತೆ ನಿಮ್ನ ವರ್ಗಗಳಿಗೆ 148 ಮೀಸಲು ಸ್ಥಾನಗಳನ್ನು ಒಪ್ಪಿಕೊಂಡು ಅಂಬೇಡ್ಕರ್‌ರವರು 1932 ಸಪ್ಟೆಂಬರ್ 24ರ ಸಂಜೆ ಐದು ಗಂಟೆಗೆ ಅನಿವಾರ್ಯವಾಗಿ ಪುನಾ ಒಪ್ಪಂದಕ್ಕೆ ಸಹಿ ಮಾಡುತ್ತಾರೆ.

ಈ ಒಪ್ಪಂದದಂತೆ ದಲಿತರಿಗೆ ಪ್ರತ್ಯೇಕ ಸ್ಥಾನಗಳನ್ನು ಮೀಸಲಿಡುವ ಕ್ರಮವು ಜಾರಿಗೆ ಬಂದಿತು. ಹೀಗೆ ಸ್ವತಂತ್ರ ಪೂರ್ವದಲ್ಲಿ ಕೇವಲ ರಾಜಕೀಯ ಪ್ರಾತಿನಿಧ್ಯದ ಕ್ರಮವಾಗಿ ಮೀಸಲಾತಿ ಅಸ್ತಿತ್ವಕ್ಕೆ ಬರುತ್ತದೆ. ಸ್ವತಂತ್ರದ ನಂತರ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡಾಗ, ಸಮಾಜವಾದಿ, ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕವಾದ ಗಣರಾಜ್ಯವನ್ನಾಗಿ ಅರ್ಪಿಸಿಕೊಳ್ಳಲಾಯಿತು. ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ದೊರಕಿಸಿ ಕೊಡುವುದರ ಜೊತೆಗೆ ಎಲ್ಲರಿಗೂ ಸಮಾನ ಅವಕಾಶಗಳು ಮತ್ತು ಸ್ಥಾನಮಾನವನ್ನು ಕಲ್ಪಿಸುವ ಹಾಗೂ ವ್ಯಕ್ತಿ ಗೌರವದಿಂದ ಜೀವನ ಸಾಗಿಸುವ ಹಿನ್ನೆಲೆಯಲ್ಲಿ ಈ ಮೀಸಲಾತಿಯನ್ನು ಅನುಮೋದಿಸಿಕೊಳ್ಳಲಾಯಿತು. ಮೀಸಲಾತಿ ಎನ್ನುವುದು ಸಾಮಾಜಿಕ ನ್ಯಾಯದ ಒಂದು ಪುಟ್ಟ ಭಾಗವಷ್ಟೇ. ಮೀಸಲಾತಿಯೆ ಅಂತಿಮ ಪರಿಹಾರವಲ್ಲ. ಸಾಮಾಜಿಕ ನ್ಯಾಯವೆಂದರೆ ಕೇವಲ ಮೀಸಲಾತಿ ಅಲ್ಲ, ಎಂದು ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಹೇಳುತ್ತಾರೆ.

ಭೀಮರಾವರವರು ತಮ್ಮ ಬದುಕಿನಲ್ಲಿ ಕಂಡ ಅಸ್ಪೃಶ್ಯತೆಯ ಅನುಭವವನ್ನು ಮತ್ತು ಸಮಾಜದಲ್ಲಿ ಬಹಿಷ್ಕಾರಗೊಂಡ ಸಮುದಾಯದ ನೋವು ತುಮಲತೆಗಳನ್ನು ತಮ್ಮ ಆತ್ಮಕಥೆಯಲ್ಲಿ ದಾಖಲಿಸಿದ್ದಾರೆ. 1929ರಲ್ಲಿ ಅಸ್ಪೃಶ್ಯರಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ ಪ್ರಕರಣದ ಬಗೆಗೆ ತನಿಖೆ ನಡೆಸಲು ಬಾಬಾ ಸಾಹೇಬರು ಚಾಲೀಸ್‌ಗಾವ್‌ಗೆ ಹೋಗಿರುತ್ತಾರೆ. ಆಗ ಚಾಲೀಸ್‌ಗಾವ್‌ನಿಂದ ಮಹಾರವಾಡಕ್ಕೆ ಅಂಬೇಡ್ಕರ್‌ರನ್ನು ಕರೆದೊಯಲು ಅವರ ಅನುಯಾಯಿಗಳು ಟಾಂಗಾದಲ್ಲಿಯೇ ಅವರನ್ನು ಕರೆದೊಯ್ಯುವ ಆಶೆಯವನ್ನು ಹೊಂದಿರುತ್ತಾರೆ. ಆದರೆ ಜಾತಿಯ ಕಾರಣದಿಂದ ತಮ್ಮ ನಾಯಕನನ್ನು ಟಾಂಗಾದಲ್ಲಿ ಕರೆದೊಯಲು ಸಾಧ್ಯವಾಗದೇ ಇದ್ದಾಗ, ಹಠದಿಂದ ಅನುಯಾಯಿಗಳು ಬಾಡಿಗೆಗೆ ತಂದಿದ್ದ ಟಾಂಗದಲ್ಲಿ ತಮ್ಮದೇ ಒಬ್ಬ ವ್ಯಕ್ತಿಯನ್ನು ಟಾಂಗ ಓಡಿಸಲು ಕೂಡಿಸುತ್ತಾರೆ. ಇದರಿಂದ ಅಪಘಾತವಾಗಿ ಬಾಬಾ ಸಾಹೇಬರು ತುಂಬಾ ನೋವನ್ನು ಅನುಭವಿಸುತ್ತಾರೆ. ಈ ಅಪಘಾತದಲ್ಲಿ ಬಾಬಾ ಸಾಹೇಬರು ತಮ್ಮ ಕಾಲನ್ನು ಸಹ ಮುರಿದುಕೊಳ್ಳುತ್ತಾರೆ.

ಹೀಗೆ ಅನೇಕ ಘಟನೆಗಳನ್ನು ಬಾಬಾ ಸಾಹೇಬರು ತಾವು ವೈಯಕ್ತಿಕವಾಗಿ ಜಾತಿಯ ಕಾರಣದಿಂದ ಅನುಭವಿಸಿದ ಅವಮಾನವನ್ನು ದಾಖಲಿಸುವುದರ ಜೊತೆಗೆ ತಾವು ಬೆಳೆದು ಬಂದ ಶೋಷಿತ ಸಮುದಾಯವು ಹೇಗೆ ಜಾತೀಯ ಕಾರಣಕ್ಕೆ ಶೋಷಣೆಗೆ ಒಳಗಾಗಿದೆ ಎನ್ನುವುದನ್ನು ಎಳೆ ಎಳೆಯಾಗಿ ಒಂದೊಂದಾಗಿ ಚರ್ಚಿಸುತ್ತಾ ಹೋಗುತ್ತಾರೆ. ಜಾತಿ, ಅಸ್ಪೃಶ್ಯತೆಯ, ಶೋಷಣೆಯು ಹೇಗೆ ವ್ಯಕ್ತಿ ಹಾಗೂ ಸಮುದಾಯಗಳ ಸಾಮಾಜಿಕತೆ ಹಾಗೂ ಮಾನಸಿಕತೆಯನ್ನು ವ್ಯಾಪಿಸಿಕೊಂಡಿದೆ ಎನ್ನುವುದನ್ನು ಭೀಮರಾವರು ಮನವರಿಕೆ ಮಾಡಿಕೊಂಡಿದ್ದರು. ಅವರ ಈ ಮನವರಿಕೆಯ ಕಾರಣದಿಂದಾಗಿಯೇ ಸಮುದಾಯದ ಪ್ರಜ್ಞೆ ಅವರನ್ನು ಅತಿ ಹೆಚ್ಚು ಸೂಕ್ಷ್ಮಗೊಳಿಸಿತ್ತು.

ಹೀಗೆ ಅಸ್ಪೃಶ್ಯ ಸಮುದಾಯದಿಂದ ಬಂದ ಒಬ್ಬ ವಿದ್ಯಾವಂತ ಎಷ್ಟೇ ಉನ್ನತ ಹುದ್ದೆಗೆ ಏರಿದ್ದರೂ ಈ ಜಾತಿ ಎಂಬ ಪೆಡಂಭೂತ ಅವರ ಬೆನ್ನ ಬಿಡದೆ ಕಾಡುತ್ತಲೇ ಇರುತ್ತದೆ. ಆ ವಿದ್ಯಾವಂತನ ವಿದ್ವತ್ತು ಶಿಕ್ಷಣವನ್ನು ಪರಿಗಣಿಸದ ಸಮಾಜವು ಅವನನ್ನು ಜಾತಿಯ ಮೂಲಕವೇ ಗುರುತಿಸುತ್ತಾರೆ. ಇಂತಹ ಅನೇಕ ಘಟನೆಗಳು 21ನೇ ಶತಮಾನದಲ್ಲಿಯೂ ಡಾಳಾಗಿ ರರಾಜಿಸುತ್ತಿರುವುದನ್ನು ಕಾಣುತ್ತೇವೆ. ಅಸ್ಪೃಶ್ಯ ಶಿಕ್ಷಕನೊಬ್ಬ ಜಾತೀಯ ಕಾರಣದಿಂದಾಗಿ ತನ್ನ ಹೆಂಡತಿ ಮಗುವನ್ನು ಕಳೆದುಕೊಂಡ ದಾರುಣ ಸ್ಥಿತಿಯನ್ನು ಬಾಬಾ ಸಾಹೇಬರು ದಾಖಲಿಸುತ್ತಾರೆ. "ಈ ತಿಂಗಳ ಐದನೇ ದಿನಾಂಕದಂದು ನನಗೆ ಮಗು ಒಂದು ಜನಿಸಿತು ಏಳನೆಯ ದಿನಾಂಕದಂದು ನನ್ನ ಬಾಣಂತಿ ಪತ್ನಿಗೆ ಭೇದಿಯಾಗಿ ಅನಾರೋಗ್ಯದಿಂದ ಬಳಲಿದಳು. ಆಕೆಯ ಶಕ್ತಿ ಉಡುಗಿ ಹೋಗಿತ್ತು. ಎದೆ ಊದಿಕೊಂಡಿತು ಉಸಿರಾಡುವುದು ಕಷ್ಟವಾಯಿತು.

ನಾನು ಡಾಕ್ಟರ್‌ಅನ್ನು ಕರೆಯಲು ಹೋದೆ ಆದರೆ ಅವರು ಅಸ್ಪೃಶ್ಯನ ಮನೆಗೆ ಬಂದು ತಾಯಿ ಮಗುವನ್ನು ತಪಸಿಸಲಾರೆ ಅಂದರು. ಆಗ ನಾನು ಊರ ಪ್ರಮುಖ ಮತ್ತು ಗರಸಿಯ ದರ್ಬಾರ್ ಅವರ ಬಳಿಗೆ ಹೋಗಿ ನನಗೆ ಸಹಾಯ ಮಾಡರಿ ಎಂದು ಬೇಡಿಕೊಂಡೆ. ನಾಗರ ಶೆಟ್ಟರನು ನಾನು ಡಾಕ್ಟರ್‌ಗೆ ಕೊಡಬೇಕಾಗಿದ್ದ ಎರಡು ರೂಪಾಯಿಗೆ ಜಾಮೀನು ಆದನು. ರೋಗಿಗಳನ್ನು ಹರಿಜನರ ಕೇರಿಯ ಹೊರಗೆ ತಂದರೆ ಮಾತ್ರ ತಪಾಸಿಸುವುದಾಗಿ ಕರಾರು ಹಾಕಿದನು. ನಾನು ನನ್ನ ಪತ್ನಿ ಮತ್ತು ನವಜಾತ ಶಿಶುವನ್ನು ಹರಿಜನರ ಕೇರಿಯ ಹೊರಗೆ ವೈದೇನು. ಆಗ ಡಾಕ್ಟರನ್ನು ತನ್ನ ಉಷ್ಣ ಮಾಪಕವನ್ನು ಮುಸ್ಲಿಮನ ಕೈಯಲ್ಲಿ ಕೊಟ್ಟನು. ಅವನು ನನಗೆ ಕೊಟ್ಟನು ನಾನು ನನ್ನ ಹೆಂಡತಿಗೆ ಕೊಟ್ಟೆ. ಅನಂತರ ಅದೇ ರೀತಿ ತಿರುಗಿ ಅದು ಡಾಕ್ಟರ್ ಕೈ ಸೇರಿತ್ತು. ಅದನ್ನು ನೋಡಿದ ಡಾಕ್ಟರ್ ರೋಗಿ ಪತ್ನಿಯು ನಿಮೋನಿಯಾದಿಂದ ಬಳಲುತ್ತಿದ್ದಾಳೆ ಎಂದು ಹೇಳಿದ. ಅಷ್ಟೊತ್ತಿಗೆ ರಾತ್ರಿ 8:00 ಆಗಿತ್ತು. ಡಾಕ್ಟರ್ ದವಾಖಾನೆಗೆ ಹೋಗಿ ಔಷಧ ಕೊಟ್ಟು ಕಳಿಸಿದ ನಾನು ಪೇಟೆಗೆ ಹೋಗಿ ಸ್ವಲ್ಪ ಅಗಸೆ ಬೀಜ ತಂದು ರೋಗಿಗೆ ಕೊಟ್ಟೆ, ಬಾಣತಿ ಮತ್ತು ಕೂಸಿನ ತೊಂದರೆ ಕಡಿಮೆಯಾಗಲಿಲ್ಲ. ನಾನು ಕರಾರಿನಂತೆ ಎರಡು ರೂಪಾಯಿ ಕೊಟ್ಟರು, ರೋಗಿಗಳನ್ನು ನೋಡಲು ಡಾಕ್ಟರ್ ತಿರುಗಿ ಬರಲಿಲ್ಲ. ರೋಗವು ಅಪಾಯಕಾರಿ ಸ್ಥಿತಿ ತಲುಪಿತು ದೇವರ ಮೇಲೆ ಭಾರ ಹಾಕಿದೆವು. ಆದರೆ ದೇವರು ನನ್ನ ನೆರವಿಗೆ ಬರದಾದ ನನ್ನ ವಂಶದ ಜ್ಯೋತಿನಂದಿತು ನನ್ನ ಪತ್ನಿಯೂ ಕೂಡ ಅಂದು ಸಾಯಂಕಾಲ ಎರಡು ಗಂಟೆಯ ಸುಮಾರಿಗೆ ಇಹಲೋಕ ತ್ಯಜಿಸಿದಳು."[5] ಇಲ್ಲಿ ಶಿಕ್ಷಕನ ಮಾತುಗಳು ಸಮಾಜದಲ್ಲಿ ಅಸ್ಪೃಶ್ಯತೆ ಜಾತಿಯತೆಯ ಕರಾಳ ಮುಖವನ್ನು ಎತ್ತಿ ತೋರಿಸುತ್ತದೆ. ಹೀಗೆಯೇ 21ನೇ ಶತಮಾನದಲ್ಲಿಯೂ ಅನೇಕ ಘಟನೆಗಳುನ್ನು ನಾವು ನೋಡುತ್ತೇವೆ. ಅಂತಹದೇ ಒಂದು ಘಟನೆಯನ್ನು ಇಲ್ಲಿ ಚರ್ಚಿಸಲ್ಲು ಬಯಸುತ್ತೆನೆ. ವಿಶ್ವ ವಿದ್ಯಾನಿಲಯದ ಒಂದು ವಿಭಾಗದ ಮುಖ್ಯಸ್ಥನಾಗಿದ್ದ ಅಸ್ಪೃಶ್ಯನು ತನ್ನ ಅವಧಿಯನ್ನು ಮುಗಿದ ನಂತರ ಅದೇ ಮುಖ್ಯಸ್ಥ ಸ್ಥಾನಕ್ಕೆ ಮೇಲ್ವರ್ಗದ ಮಹಿಳೆಯು ಮುಖ್ಯಸ್ಥಳಾಗುತ್ತಾಳೆ. ಆದರೆ ಅವಳು ಅಸ್ಪೃಶ್ಯ ಕುಳಿತ ಕುರ್ಚಿಯ ಮೇಲೆ ಕೂಡಲು ನಿರಾಕರಿಸುತ್ತಾಳೆ. ಅದಕ್ಕೆ ಅವಳು ಕೊಟ್ಟ ನೆಪವೆಂದರೆ ತನಗೆ ಬ್ಯಾಕ್ ಪೇನ್ ಇದೆ ಎಂದು ಹೇಳುತ್ತಾಳೆ. ಆದರೆ ವಿಚಿತ್ರವೆಂದರೆ ಅಂತದ್ದೆ ತನ್ನ ಚೇಂಬರಿನಿಂದ ಒಂದು ಕುರ್ಚಿಯನ್ನು ತರಿಸಿಕೊಂಡು ಅದರ ಮೇಲೆ ಕುಳಿತುಕೊಳ್ಳುತ್ತಾಳೆ. ಇಲ್ಲಿ ಮುಖ್ಯವಾಗುವುದು ವಿದ್ಯೆ, ಜ್ಞಾನ, ಪ್ರಜ್ಞೆ ಅಲ್ಲ ಜಾತಿ ಎನ್ನುವುದನ್ನು ನಾವು ಕಾಣುತ್ತೇವೆ. ಸಂವಿಧಾನದ ಅಡಿಯಲ್ಲಿಯೇ ಆ ಮಹಿಳೆ ಇವತ್ತು ಮುಖ್ಯಸ್ಥಳಾಗಿದ್ದಾಳೆ. ಆದರೆ ಅದೇ ಸಂವಿಧಾನ ಹೇಳುವಂತಹ ಮೌಲ್ಯವಾದ ಸಮಾನತೆ, ಭ್ರಾತೃತ್ವ, ಬಂದುತ್ವ, ಸಮತೆ, ಘನತೆಯನ್ನುವ ಮೌಲ್ಯಗಳನ್ನು ಮರೆತು, ಕೇವಲ ಜಾತಿಯ ಭೂತದಿಂದ ಬಂದಿತಳಾಗಿರುವುದನ್ನು ಕಾಣುತ್ತೇವೆ. ಒಟ್ಟಾರೆಯಾಗಿ ಸಮಾಜದಲ್ಲಿ ಸಮಾನತೆ

ಎನ್ನುವುದು ಅಸ್ತಿತ್ವಕ್ಕೆ ಬರುವವರೆಗೂ ಮೀಸಲಾತಿ ಎನ್ನುವುದು ಇದ್ದೇ ಇರುತ್ತದೆ. ಸಮಾಜದಲ್ಲಿ ಸಮ ಸಮಾಜ ನಿರ್ಮಾಣವಾಗುವವರೆಗೂ ಇದು ಜಾರಿಯಲ್ಲಿ ಇರಲೇಬೇಕಾದಂತಹ ಅನಿವಾರ್ಯತೆ ಇದೆ.

**ಕೊನೆ ಟಿಪ್ಪಣಿಗಳು:**

1. ಅಂಬೇಡ್ಕರ್ ಬಿ.ಆರ್. (ಮೂಲ), ಸದಾಶಿವ ಮರ್ಜಿ (ಅನು), (2022), ವೀಸಾದ ನಿರೀಕ್ಷೆಯಲ್ಲಿ ನೆನಪುಗಳು, ಲಡಾಯಿ ಪ್ರಕಾಶನ, ಗದಗ, ಪು.ಸಂ. 9
2. ಅಪ್ಪಗೆರೆ ಸೋಮಶೇಖರ್, (2023), ಮಾನವತೆಯ ಮಾರ್ಗದಾತ, ಅಚಲ ಪುಸ್ತಕ, ಬೆಂಗಳೂರು, ಪು.ಸಂ. 120
3. ಅದೇ, ಪು.ಸಂ. 48
4. ನಾಗಮೋಹನದಾಸ್ ಹೆಚ್.ಎನ್., (2022), ಮೀಸಲಾತಿ ಭ್ರಮೆ ಮತ್ತು ವಾಸ್ತವ, ಜನ ಪ್ರಕಾಶನ, ಬೆಂಗಳೂರು, ಪು.ಸಂ. 34
5. ಅಂಬೇಡ್ಕರ್ ಬಿ.ಆರ್. (ಮೂಲ), ಸದಾಶಿವ ಮರ್ಜಿ (ಅನು), (2022), ವೀಸಾದ ನಿರೀಕ್ಷೆಯಲ್ಲಿ ನೆನಪುಗಳು, ಲಡಾಯಿ ಪ್ರಕಾಶನ, ಗದಗ, ಪು.ಸಂ. 40–41.

**ಆಕಾರ ಗ್ರಂಥ:**


1. ಅಂಬೇಡ್ಕರ್ ಬಿ.ಆರ್. (ಮೂಲ), ಸದಾಶಿವ ಮರ್ಜಿ (ಅನು), (2022), ವೀಸಾದ ನಿರೀಕ್ಷೆಯಲ್ಲಿ ನೆನಪುಗಳು, ಲಡಾಯಿ ಪ್ರಕಾಶನ, ಗದಗ.


**ಪರಾಮರ್ಶನ ಗ್ರಂಥಗಳು:**


1. ಚಿನ್ನಸ್ವಾಮಿ ಸೋಸಲೆ ಎನ್., (2013), ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು, ಯಾಜಿ ಪ್ರಕಾಶನ, ಬಳ್ಳಾರಿ.
2. ಅಪ್ಪಗೆರೆ ಸೋಮಶೇಖರ್, (2023), ಮಾನವತೆಯ ಮಾರ್ಗದಾತ, ಅಚಲ ಪುಸ್ತಕ, ಬೆಂಗಳೂರು.
3. ನಾಗಮೋಹನದಾಸ್ ಹೆಚ್.ಎನ್., (2022), ಮೀಸಲಾತಿ ಭ್ರಮೆ ಮತ್ತು ವಾಸ್ತವ, ಜನ ಪ್ರಕಾಶನ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.